



ಬಲೇಯಾಜ್ ವಿನ್ಯಾಸದಲ್ಲಿ ಸ್ಟೈಲಿಸ್ಟ್‌ಗಳ ಮೇಲೆ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಸೂಕ್ತವಾದ ಕೇಶವಿನ್ಯಾಸ ಮಾಡಿ ನಂತರ ಕಲರಿಂಗ್ ಮಾಡಬೇಕು. ಹೇರ್‌ಕಟ್ ಮಾಡುವಾಗ ರಾಶಿ ರಾಶಿ ಕೂದಲನ್ನು ಹಿಡಿದು ಫೆದರ್ ಕಟ್ ಮಾಡುವುದಲ್ಲ. ಕೂದಲನ್ನು ಸಣ್ಣ ಸಣ್ಣ ಭಾಗಗಳನ್ನಾಗಿ ಸೀಳಿಕೊಂಡು ಫೆದರ್ ಕಟ್ ಮಾಡುತ್ತ ಹೋಗಬೇಕು. ಕೂದಲಿನ ಅಲೆಗಳು ಹೆಚ್ಚು ದಿನ ಉಳಿಯುವುದು ಆಗಲೇ. ಬಣ್ಣ ಹಚ್ಚುವಾಗಲೂ ಅಷ್ಟೆ ಸೂಕ್ಷ್ಮವಾಗಿ ಕೆಲಸ ಮಾಡಬೇಕು. ಬಣ್ಣ ಎಲ್ಲಿ ಢಾಳಾಗಿ ಕಾಣಬೇಕು, ಎಲ್ಲಿ ತೆಳುವಾಗಿರಬೇಕು ಎನ್ನುವುದನ್ನು ಮೊದಲೇ ನಿರ್ಧರಿಸಿಕೊಂಡು ಅದಕ್ಕೆ ಅನುಗುಣವಾಗಿ ಬಣ್ಣ ಕೊಡುತ್ತ ಹೋಗಬೇಕು. ಕೂದಲಿನ ಅಂಚು ಹೆಚ್ಚು ಪ್ರಕಾಶಮಾನವಾಗಿ ಕಾಣುವಂತೆ ಫಿನಿಶಿಂಗ್ ನೀಡಬೇಕು.

**-ರಿಯಾನ್ ಡಿ'ರೊಜಾರಿಯೊ,** ಗೋದ್ರೆಜ್ ಪ್ರೊಫೆಶನಲ್‌ನ ತಾಂತ್ರಿಕ ರಾಯಭಾರಿ

ಮತ್ತೆ ಮನೆಮನೆಯ ಮಾತಾಗಿದೆ. ಮೆಟ್ರೊ ನಗರಗಳ ಬಹುತೇಕ ಯುವತಿಯರು ಇಂದು ಈ ಫ್ರೀಸ್ಟೈಲ್‌ಗೆ ಫಿದಾ ಆಗಿದ್ದಾರೆ.

ಅದಿರಲಿ, ನಿಮ್ಮ ಕೂದಲಿಗೆ ನೀವೀಗ ಹೊಸ ನೋಟ ತುಂಬಬೇಕು, ಆ ಮೂಲಕ ನಿಮ್ಮ ವ್ಯಕ್ತಿತ್ವಕ್ಕೂ ಹೊಸ ಛಾಯೆ ಸೋಕಿಸಬೇಕು ಎಂದು ಬಯಸಿದ್ದರೆ ಈ ಬಲೇಯಾಜ್ ಸ್ಟೈಲ್‌ಗೆ ನೀವೊಮ್ಮೆ ಅಪ್‌ಡೇಟ್ ಆಗಿ ನೋಡಬಹುದು. ಅದಕ್ಕೂ ಮುನ್ನ ಭಾರತೀಯ ಮುಖಚರ್ಯೆಗಳಿಗೆ, ಮೈಬಣ್ಣಕ್ಕೆ ಹೊಂದುವ, ಯಂಗ್ ಲುಕ್ ನೀಡುವ ಜೊತೆಗೆ ಕಡಿಮೆ ನಿರ್ವಹಣೆಯ ಈ ಆಯ್ಕೆಯ ಬಗ್ಗೆ ಒಂದಷ್ಟು ತಿಳಿದುಕೊಳ್ಳಿ.

## ಬಲೇಯಾಜ್ ವೃತ್ತಾಂತ

ಬಲೇಯಾಜ್ ಅಂದರೆ ಸೊಗಸಾದ ಬಣ್ಣಗಳಿಂದ ಕಲಾತ್ಮವಾಗಿ ನಿಮ್ಮ ಕೇಶರಾಶಿಯನ್ನು ಹೈಲೈಟ್ ಮಾಡುವ ತಂತ್ರ. ಒಬ್ಬ ಕಲಾವಿದ ವರ್ಣಚಿತ್ರ ರಚಿಸುವಾಗ ಬಣ್ಣವನ್ನು ಎಷ್ಟು ಮುತುವರ್ಜಿಯಿಂದ ಬ್ಲೆಂಡ್ ಮಾಡುತ್ತಾನೆ ಮತ್ತು ಬ್ರಶ್ ಅನ್ನು ಎಷ್ಟು ಕಲಾತ್ಮಕವಾಗಿ ಬಳಸುತ್ತಾನೆ ಎನ್ನುವುದನ್ನು ನೋಡಿದವರಿಗೆ ಈ ಬಲೇಯಾಜ್ ಹೇರ್ ಕಲರಿಂಗ್‌ನ ಶೈಲಿ ಬೇಗ ಅರ್ಥವಾಗಬಹುದು. ಈ ವಿನ್ಯಾಸದ ಮಾದಕತೆ ವ್ಯಕ್ತವಾಗುವುದು ಸೊಂಟದವರೆಗಿನ ಉದ್ದ ಕೂದಲಿದ್ದಾಗಲೇ. ಅದಕ್ಕಿಂತ ಗಿಡ್ಡ ಕೂದಲಿಗೂ ಈ ತಂತ್ರವನ್ನು ಅನ್ವಯಿಸಬಹುದು. ಆದರೆ ಕೂದಲು ಗಿಡ್ಡವಿದ್ದಷ್ಟೂ ಬಲೇಯಾಜ್‌ನ ತೀವ್ರತೆ ಸ್ವಲ್ಪ ಸ್ವಲ್ಪವೇ ಕಡಿಮೆಯಾಗುತ್ತ ಹೋಗುತ್ತದೆ. ಪ್ರಕಾಶಮಾನವಾದ ಬ್ರೌನ್ ಕಲರ್ ನಡುನಡುವೆ ಢಾಳಾಗಿಯೂ ಕೆಲವೆಡೆ ತಿಳಿಯಾಗಿಯೂ ಮತ್ತೆ ಅಂಚಿನಲ್ಲಿ ಸೂರ್ಯ ರಶ್ಮಿಯ ಶೇಡ್‌ನಂತೆ ಹೊಳೆಯುವಂತೆಯೂ ವ್ಯಕ್ತವಾಗಬೇಕಾದರೆ ಕೇಶರಾಶಿ ಉದ್ದವಿದ್ದಷ್ಟೂ ಆಕರ್ಷಕ.

ಭಾರತೀಯ ಮೈಬಣ್ಣ ಸಾಮಾನ್ಯವಾಗಿ ಗೋಧಿಬಣ್ಣದ್ದಾಗಿರುತ್ತದೆ. ಹೀಗಾಗಿ ಇಲ್ಲಿ ತಿಳಿ ಕಂದು ಬಣ್ಣ ಹೆಚ್ಚು ಜನಕ್ಕೆ ಒಪ್ಪುತ್ತದೆ. ಇದು ಎಲ್ಲಾ ವಯೋಮಾನದವರಿಗೂ ಹೊಂದುತ್ತದೆ. ಕೃಷ್ಣ ಬಣ್ಣದವರಿಗೆ ಅಷ್ಟೊಂದು ಸರಿಹೋಗುವುದಿಲ್ಲ. ಗೋಧಿ ಬಣ್ಣ ಹಾಗೂ ಕಪ್ಪು ಸುಂದರಿಯರಿಗೆ ಒಪ್ಪುವುದು ಕ್ಯಾರಮೆಲ್ ಬ್ರೌನ್, ಅಂದರೆ ಹೊಂಬಣ್ಣ ಸಹ ಚೆಂದ. ಬಿಳಿ ಕೂದಲನ್ನು ಮರೆಮಾಚಲು ಒದ್ದಾಡುವವರೂ ಸಹ ಈ ಬಣ್ಣವನ್ನು ಪ್ರಯತ್ನಿಸಬಹುದು. ಕಾಲೇಜು ಹುಡುಗಿಯರು ಹೆಚ್ಚಾಗಿ ಗಾಢ ಕಂದು ಬಣ್ಣವನ್ನು ಇಷ್ಟಪಟ್ಟರೆ, ಮಧ್ಯಮ ಅಥವಾ ಬಿಳಿ ಬಣ್ಣದವರಿಗೆ ಕೆಂಪು ಮಿಶ್ರಿತ ಕಂದು ಬಣ್ಣ (ದಾಲ್ಚಿನ್ನಿ ಕಂದು) ಒಪ್ಪುತ್ತದೆ. ತೀರಾ ಬೋಲ್ಡ್ ಲುಕ್ ಬಯಸುವವರು ಮರೂನ್, ಡೀಪ್ ವೈನ್, ಬರ್ಗಂಡಿ ಬಣ್ಣಗಳನ್ನು ಪ್ರಯತ್ನಿಸಬಹುದು. ಡ್ಯುಯಲ್ ಟೋನ್ ಎಫೆಕ್ಟ್ ಬಯಸುವವರು ಬ್ರೌನ್ ಜೊತೆಗೆ ಗಾಢ ಕೆಂಪು ಬಣ್ಣವನ್ನು ಸೇರಿಸಬಹುದು.

ಬಲೇಯಾಜ್‌ನಲ್ಲೂ ಹಲವು ವಿಧ. ನಿಮ್ಮ ಕೂದಲಿನ ಸ್ವಾಭಾವಿಕ ಬಣ್ಣ, ಸ್ವಭಾವ, ಉದ್ದ, ಹಿಂದಿನ ವಿನ್ಯಾಸದ ಆಧಾರದ ಮೇಲೆ ನಿಮಗೆ ಯಾವ ಬಲೇಯಾಜ್, ಯಾವ ಬಣ್ಣ ಒಪ್ಪುತ್ತದೆ ಎನ್ನುವುದನ್ನು ಸ್ಟೈಲಿಸ್ಟ್‌ಗಳು ನಿರ್ಧರಿಸುತ್ತಾರೆ. ಬ್ರೌನ್, ಪಿಂಕ್, ವೈಲೆಟ್, ಆ್ಯಶ್... ಯಾವ ಬಣ್ಣ ನಿಮಗೆ ಇಷ್ಟ ಎನ್ನುವುದು ಮುಖ್ಯವಲ್ಲ, ನಿಮಗೆ ಇದರಲ್ಲಿ ಯಾವುದು ಒಪ್ಪುತ್ತದೆ ಎನ್ನುವುದನ್ನು ನೋಡಬೇಕು.

ಕಂಪ್ಯೂಟರ್‌ನಲ್ಲಿ ನಿಮ್ಮ ಚಿತ್ರಕ್ಕೆ ನಿರ್ದಿಷ್ಟವಾದ ಬಣ್ಣವನ್ನು ಅನ್ವಯಿಸಿ ನೋಡಿ, ಅದು ನಿಮಗೆ ಹೇಗೆ ಕಾಣುತ್ತದೆ ಎನ್ನುವುದನ್ನು ಗಮನಿಸಿ ನಂತರ ಸೂಕ್ತವಾದುದನ್ನು ನಿಮ್ಮ ಕೂದಲಿನ ಮೇಲೆ ಪ್ರಯೋಗಿಸುವ ಆಯ್ಕೆಯೂ ಇದೀಗ ಕೆಲ ಸಲೂನ್‌ಗಳಲ್ಲಿ ಇದೆ. ಮೊದಲ ಬಾರಿಗೆ ಬಲೇಯಾಜ್ ಪ್ರಯತ್ನಿಸುವವರು ಈ ಕ್ರಮವನ್ನು ಅನುಸರಿಸಬಹುದು. ■



ಬಲೇಯಾಜ್ ಒಂದು ತಂತ್ರ, ಕೌಶಲ– ಒಂದು ಕಲೆಯೂ ಹೌದು. ಸಣ್ಣದೊಂದು ಪಾರ್ಟಿಯಿಂದ ಹಿಡಿದು ರೆಡ್ ಕಾರ್ಪೆಟ್ ಮೇಲೆ ಊರುವ ಹೆಜ್ಜೆಯವರೆಗೂ ಎಲ್ಲಾ ಕಡೆ, ಎಲ್ಲರಿಗೂ ಒಗ್ಗುವ ಸ್ಟೈಲ್ ಬಲೇಯಾಜ್ ಆದರೆ ಸ್ಟೈಲಿಸ್ಟ್‌ಗಳು ಮಾತ್ರ ಬಹು ಎಚ್ಚರಿಕೆಯಿಂದ ಮಾಡಬೇಕಿದನ್ನು. ಚಿತ್ರ ಕಲಾವಿದನ ಕೈಯಲ್ಲಿ ಕುಂಚದಂತೆ ಬ್ರಶ್ ಅನ್ನು ಬಳಸುವ ಕಲೆ ಸಿದ್ಧಿಸಿದವರು ಮಾತ್ರ ಬಲೇಯಾಜ್‌ಗೆ ಒಪ್ಪಿತರು. ಬಣ್ಣಗಳ ತೀಕ್ಷ್ಣವಾದ ಗೆರೆಗಳ ಬದಲು ಇಲ್ಲಿ ಕೂದಲಿಗೆ ನೈಸರ್ಗಿಕ ನೋಟವನ್ನು ನೀಡುವಂತೆ ಬಣ್ಣದ ಅಲೆಯನ್ನು ಸೃಷ್ಟಿಸಬೇಕಾಗುತ್ತದೆ.

**-ಹೀನಾ ದಲ್ವಿ,** ಗೋದ್ರೆಜ್ ಪ್ರೊಫೆಶನಲ್‌ನ ತಾಂತ್ರಿಕ ಮುಖ್ಯಸ್ಥೆ